ಶ್ರೀ ಡಿ. ದೇವರಾಜ ಅರಸ್.—ಈಗ ವ್ಯವಸಾಯದಲ್ಲಿರತಕ್ಕ ಜನರು ಕಡಿಮೆಯಾಗಬೇಕು ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ನಿರುದ್ಯೋಗ ನಮ್ಮಲ್ಲಿ ತುಂಬಾ ಇದೆ. ಬ್ಯಾಕ್‌ಲಾಗ್ ಹೆಚ್ಚಾಗಿ, ಪ್ರತಿಯೊಂದು ಪಂಚವಾರ್ಷಿಕ ಯೋಜನೆಯಲ್ಲೂ ಕೂಡ ಈ ಪ್ರಶ್ನೆಯನ್ನು ಪೂರೈಸಲಕ್ಕೆ ಆಗಿಲ್ಲ. ಅದೇ ಹೊತಿ ಗೆ ನಾವು ನಮ್ಮ ಜನರನ್ನು ಕೆಲಸಕ್ಕೆ ನೇಮಕ ಮಾಡುವುದಕ್ಕೆ ಬದಲಾಗಿ ಕಂಪ್ಯೂಟರ್‌ನ್ನು ತಂದು ಉದ್ಯೋಗಸ್ಥರನ್ನು ಕಡಿಮೆ ಮಾಡುತ್ತಾ ಇದ್ದೇವೆ. ಕೃಷಿಯಲ್ಲಿ ಯಂತ್ರಗಳನ್ನು ತಂದು ಕೃಷಿ ಕೆಲಸ ಮಾಡುವವರ ಸಂಖ್ಯೆಯನ್ನು ಕಡಿಮೆ ಮಾಡುತ್ತಾ ಇದ್ದೇವೆ. ಈ ಕೆಲವು ವಿಭಾಗಗಳಲ್ಲಿ ಯಂತ್ರಗಳನ್ನು ತಂದು ಉದ್ಯೋಗಗಳನ್ನು ಕಡಿಮೆ ಮಾಡಿ ನಿರುದ್ಯೋಗಗಳನ್ನು ಬೆಳೆಸುವ ಬದಲು ಜನರೇ ಕೆಲಸ ಮಾಡುವ ಹಾಗೆ ಮಾಡಿದರೆ ಏನು ಕಷ್ಟವಾಗುತ್ತದೆ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶದಲ್ಲಿ ಯಂತ್ರಗಳ ಸಹಾಯದಿಂದ ವ್ಯವಸಾಯ ಮಾಡುವುದು ಬಹಳ ಕಡಿಮೆ—ಬೇರೆ ದೇಶಗಳಿಗೆ ಹೋಲಿಸಿಕೊಂಡಾಗ ಬಹಳ ಕಡಿಮೆ ಎಂದು ಹೇಳಬಹುದು. ನಾವಿನ್ನೂ ಇಡೀ ವ್ಯವಸಾಯ ಕ್ಷೇತ್ರವನ್ನೆಲ್ಲಾ ಮ್ಯಾಕನೈಸ್ ಮಾಡಬೇಕೆಂದು ಹೊರಟಿಲ್ಲ. ಸರ್ಕಾರದ ಉದ್ದೇಶವೂ ಕೂಡ ಅದಲ್ಲ. ನಮ್ಮ ದೇಶದಲ್ಲಿ ಲ್ಯಾಂಡ್ ಡಿಸ್ಟ್ರಿಬ್ಯೂಷನ್ ಪ್ಯಾಟ್ರನ್ ಕೂಡ ಅದಕ್ಕೆ ಅನುಕೂಲಕರವಾಗಿಲ್ಲ, ಅದು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಅವರು ಎರ್.ಐ.ಸಿ. ಯನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಕಂಪ್ಯೂಟರ್ಸ್ ಹಾಕುತ್ತಾರೆ ಎಂಬ ಭಾವನೆಯಿಂದ ಹೇಳಿರಬಹುದು. ಕಂಪ್ಯೂಟರ್ಸ್‌ನ್ನು ಇಟ್ಟುಕೊಂಡು ಅಲ್ಲಿನ ಜನರನ್ನು ತೆಗೆದು ಹಾಕುವುದಿಲ್ಲ ಎಂದು ಈಗಾಗಲೇ ಅವರು ಸಾಕಷ್ಟು ಸಾರಿ ಹೇಳಿದ್ದಾರೆ. ಆ ಸಮಸ್ಯೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಕೇಂದ್ರದಿಂದ ಕೊಡಬೇಕಾಗಿರತಕ್ಕ ನೆರವಿನಿಂದ ಸ್ಥಾಪಿಸಬೇಕಾಗಿರತಕ್ಕ ಕೈಗಾರಿಕೆಗಳು ಈ ರಾಜ್ಯದಲ್ಲಿ ಇಲ್ಲದೆ ಇರುವುದರಿಂದ ಈ ನಿರುದ್ಯೋಗ ಸಮಸ್ಯೆ ಇಲ್ಲಿ ಪ್ರಬಲವಾಗಿ ಬೆಳೆದಿರುವುದಕ್ಕೆ ಕಾರಣವಾಗಿದೆಯಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಕೇಂದ್ರದಿಂದ ಸಾಕಾದಷ್ಟು ಕೈಗಾರಿಕೆಗಳು ನಮ್ಮಲ್ಲಿ ಬಂದಿದೆ, ಇನ್ನೂ ಬರುವುದು ಇದೆ.

Workers employed in Beedi Industry

*Q.—30. Sri A. KRISHNA SHETTY (Mangalore II).—

Will the Minister for Transport and Tourism be pleased to state :—

(a) the number of workers employed in Beedi Industry in S. K. District ;

(b) the number of beedi factories and the number employees in these factories in the above district ;

(c) the action taken by the Government to implement minimum wages and to stop contract system in the industry ?

A.—Sri D. DEVARAJ URS (Minister for Transport and Tourism).—

(a) About 40,000.

(b) 17 (Seventeen) registered beedi factories in S. K. District employing about 472 workers and about 40,000 workers outside the factory.

(c) Authorities have been appointed to enforce the provisions of the Minimum Wages Act. There is no specific provision of law prohibiting contract system.

ಶ್ರೀ ಎ. ಕೃಷ್ಣಶೆಟ್ಟಿ.—ನಮ್ಮ ಜಿಲ್ಲೆಯಲ್ಲಿರತಕ್ಕ ಕೂಲಿಗಾರರಲ್ಲಿ ಅಂದರೆ, 40 ಸಾವಿರ ಜನರಲ್ಲಿ ಕೇವಲ 477 ಜನರು ಮಾತ್ರ ಬೀಡಿ ಕೆಲಸದಲ್ಲಿ ಇರುತ್ತಾರೆ. ಆದರೆ ಇವರಿಗೆ ಇನ್ನಿತರ ಕೈಗಾರಿಕೆಗಳಲ್ಲಿರತಕ್ಕ ಕೂಲಿಗಾರರಿಗೆ ಸಿಕ್ಕತಕ್ಕ ರಜ ಇತ್ಯಾದಿ ಸೌಲಭ್ಯಗಳೊಂದೂ ಸಿಗುತ್ತಿಲ್ಲ. ಅವುಗಳು ಇವರಿಗೆ ಸಿಗುವುದಕ್ಕಾಗಿ ಸರ್ಕಾರದವರು ಏನು ಕ್ರಮಕೈಗೊಂಡಿದ್ದಾರೆ ?

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ಬೀಡಿ ಕಲಸಗಾರರ ಆಕ್ಟ್ ಮತ್ತು ರೂಲ್ಸ್‌ಗಳು ಪಾಸಾಗಿವೆ. ಆದರೆ ಅವುಗಳಲ್ಲಿ ಯಾವ ಯಾವ ಕ್ಲಾಜುಗಳನ್ನು ಯಾವ ಯಾವ ಪ್ರದೇಶಕ್ಕೆ ಅನ್ವಯಿಸಬೇಕು ಎಂಬುದನ್ನು ನಾವು ಬುದ್ಧಿವಂತಿಕೆಯಿಂದ ಮಾಡಬೇಕಾಗಿದೆ. ಸರ್ಕಾರಕ್ಕೆ ಈಗ ಮುಖ್ಯವಾಗಿ ಬಂದಿರತಕ್ಕ ಒಂದು ಶಂಕೆಯೇನೆಂದರೆ: ನಾವು ಈ ಕಾನೂನುಗಳನ್ನು ಜಾರಿಗೆ ತಂದರೆ ಎಲ್ಲ ಈಗಿರತಕ್ಕ ಉದ್ಯೋಗಗಳು ಬಂದಾಗಿಬಿಡುತ್ತವೋ ಎಂಬ ಒಂದು ಶಂಕೆ ಬಂದಿದೆ. ಆದುದರಿಂದ ಆ ಉದ್ಯೋಗಗಳೂ ಬಂದಾಗದಂತೆ ಮತ್ತು ಅಲ್ಲಿ ಕೆಲಸಮಾಡತಕ್ಕ ಜನರಿಗೂ ಅನಾನುಕೂಲವಾಗದಂತೆ ನೋಡಿಕೊಂಡು ಕಾನೂನನ್ನು ಜಾರಿಗೆ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಇದನ್ನು ಜಾರಿಗೆ ತಂದಾಗ ಬಹುಶಃ ಶ್ರೀ ಕೃಷ್ಣಶೆಟ್ಟರು ಕೇಳತಕ್ಕ ಪ್ರಶ್ನೆಗೆ ಅನುಕೂಲ ದೊರೆಯುತ್ತದೆಂದು ಕಾಣುವುದು.

ಶ್ರೀ ಎ. ಕೃಷ್ಣಶೆಟ್ಟಿ.—ಬೀಡಿ ಕೆಲಸಗಾರರಲ್ಲಿ ಬಹಳ ಮಂದಿ ಟಿ.ಬಿ. ಕಾಯಿಲೆಗೆ ತುತ್ತಾಗಿರುತ್ತಾರೆಂಬ ವಿಚಾರ ಸರ್ಕಾರದವರಿಗೂ ಗೊತ್ತಿದೆ, ಆದುದರಿಂದ ಇವರಿಗೆ ಕೆಲವು ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕಾಗಿ ಮಾಲೀಕರು ಏನಾದರೂ ಒಂದು ಕ್ರಮ ಕೈಗೊಳ್ಳುವಂತೆ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಕಾನೂನು ಪ್ರಕಾರ ಏನು ಮಾಡಬಹುದೋ ಅದನ್ನು ಮಾಡಬಹುದು. The Act is there. Whatever is possible to be done under the Act, we will do.

Sri G. V. GOWDA.—The Minister was pleased to say that there is no specific provision of law prohibiting contract system. If there is any such lacuna in the Act, why does not the Government come forward with an amendment to the Act to prohibit the contract system?

Sri D. DEVARAJ URS.—The contract system in general is sought to be done away with, but the Bill for the same is before Parliament. After due deliberation it is found that it may not be desirable to make provision altogether to do away with contract system under the Act because it was thought that by so doing we would drive away the entire industry to some other place.

Sri C. J. MUCKANNAPPA.—After the passing of the Act, what is the difficulty of the Department in implementing at least the provisions which are helpful to the workers ?

Sri D. DEVARAJ URS.—I have replied that it is before Government and we are trying to implement it shortly.

Disease to Ragi Crops.

*Q.—20. **Sri B. J. LINGE GOWDA** (Channapatna).—

Will the Minister for Agricultare be pleased to state :—

(*a*) whether it has come to the notice of the Government that ragi crops in some parts of the State were totally destroyed on account of certain "worm disease";

(*b*) what action has been taken to provide relief to the ryots ?